ಅನ್ಯಾಯವಾಗುತ್ತದೆ. ಇದು 60 ರಿಂದ 90ಪರ್‌ಸೆಂಟ್‌ರ ವರೆಗೆ ಇರುವ ಸಬ್ಸಿಡಿಯಾಗಿದೆ. ಇದನ್ನು ಸರಕಾರದವರು ಕೊಡುತ್ತಾರೆಯೇ? ಇದರಲ್ಲಿ ತುಮಕೂರಿನ 2 ಕೋಟಿಗಳು ಹಾಗೆಯೋ ಉಳಿದುಬಿಡುತ್ತದೆ. ಇವೊತ್ತು ಹೇಳುವ ಪ್ರಕಾರ 12.15ಕೋಟಿ ಬಿಡುಗಡೆ ಮಾಡಿದರೂ ಕೂಡ ತುಮಕೂರಿನಲ್ಲಿ 2ಕೋಟಿ, ಶಿವಮೊಗ್ಗದಲ್ಲಿ 2ಕೋಟಿ, ಚಿತ್ರದುರ್ಗದಲ್ಲಿ 1ಕೋಟಿ, ಬಿಜಾಪುರದಲ್ಲಿ 75ಲಕ್ಷ ಬಾಕಿ ಉಳಿಯುವ ಹಣವನ್ನು ಕೊಡುವುದಕ್ಕೆ ಸರಕಾರದವರು ಏನಾದರೂ ಯೋಜನೆ ಮಾಡಿದ್ದಾರೆಯೇ? ಸುಮಾರು 6 ಕೋಟಿಗಳನ್ನು ಮಾರ್ಚ್ 31ರೊಳಗಾಗಿ ಕೇಂದ್ರದವರಿಂದ ತರಿಸಿಕೊಳ್ಳಬೇಕಾಗಿದೆ. ಅದಕ್ಕೆ ತಮ್ಮಕಾರ್ಯಕ್ರಮಗಳೇನು ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಈ ಡ್ರಿಫ್ ಇಗೇಷನ್ ಬಗ್ಗೆ ಕೆಲವು ವಿಚಾರಗಳನ್ನು ಎತ್ತಿದ್ದೇವೆ. ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಸಮರ್ಪಕವಾದ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಜೆ. ಸಿ.ಮಾಧುಸ್ವಾಮಿ : ಮಾರ್ಚ್ 31ಕ್ಕೆ ಭಾರತ ಸರಕಾರದಿಂದ ತಾವು ಹಣ ತರಿಸಿಕೊಳ್ಳಬೇಕಾಗಿದೆ.

ಐ) ಬೀದರ್‌ನಲ್ಲಿನ ರೈಲ್ವೆಗೆ ಸೇರಿದ ಜಮೀನನ್ನು ಇತರರು ಅತಿಕ್ರಮಿಸಿರುವ ಬಗ್ಗೆ

ಶ್ರೀ ಸಯ್ಯದ್ ಜುಲ್‌ಫಿಕರ್ ಹಷ್ಮಿ(ಬೀದರ್) : ಸರ್ವೆ ನಂ. 28,29 30, ಮತ್ತು 31 ಇದು ರೈಲ್ವೆ ಲ್ಯಾಂಡ್. ಈ ಲ್ಯಾಂಡ್‌ನಲ್ಲಿ ಬೇರೆಯವರು ಅತಿಕ್ರಮಿಸುತ್ತಿದ್ದಾರೆ. ಮಾನ್ಯ ಕಂದಾಯ ಸಚಿವರು ಈ ತಿಂಗಳು 9 ರಂದು ಬೀದರ್‌ಗೆ ಬಂದಿದ್ದರು. ಅವರು ವಿವರವಾಗಿ ವಿಚಾರಣೆ ಮಾಡಿದ್ದಾರೆ. ಅವರಿಗೆ ಬಹಳ ಅಭಿವಂತನೆಗಳು. ಅವರು ಯಾರು ಮಾತನ್ನೂ ಕೇಳಿಲ್ಲ. ಇಲ್ಲಿ ಏನು ಅವ್ಯವಹಾರಗಳು ನಡೆದಿವೆ ಇದರ ಬಗ್ಗೆ ವಿಚಾರಣೆ ಮಾಡಿ ಏನು ಇಲ್ಲೇಗಲ್ ಇದೆ. ಇದರ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆಗಬೇಕು, ಮುನಿಸಿಪಾಲಿಟಿಯವರು ನೀಡಿರುವ ಪರ್ಮಿಷನ್ ಕ್ಯಾನ್ಸಲ್ ಆಗಬೇಕು ಎಂದು ಸೂಚನೆಯನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದಾರೆ. ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ತಾವು ಆದೇಶ ಕೊಟ್ಟಿದ್ದೀರಿ, ಹತ್ತು ದಿವಸದ ಒಳಗಾಗಿ ವಿಚಾರಣೆ ಮಾಡಿ ಎಂದು. ಅವರು ವರದಿ ಕೊಡಬೇಕಾಗಿತ್ತು. ಈಗಾಗಲೇ ಹತ್ತು ದಿವಸವಾಗಿದೆ. ಜಿಲ್ಲಾಧಿಕಾರಿಗಳು ಇನ್ನೂ ಏನೂ ಕ್ರಮ ತೆಗೆದುಕೊಂಲ್ಲ. ಈ ಜಿಲ್ಲಾಧಿಕಾರಿಗಳು ಬೀದರಿಗೆ ಬಂದ ಒಂದು ವರ್ಷದಲ್ಲಿ ಇಂತಹ ಪ್ರಕರಣ ನಡೆಯುತ್ತಿದೆ. ಬೀದರಿನಲ್ಲಿ ಎಜಿಟೇಷನ್ ಆಗುತ್ತಿದೆ. ಸಿಟಿಜನ್ ಕಮಿಟಿ ಫಾರ್ ಪ್ರೊಟೆಷನ್ ಆಫ್ ಪಬ್ಲಿಕ್ ಪ್ರಾಪರ್ಟಿಯವರು ಇದರ ಕಡೆಗೆ ಗಮನ ಕೊಡಬೇಕು. ಜಿಲ್ಲಾಧಿಕಾರಿಗಳನ್ನು

ಕೂಡಲೇ ಸಸ್ಪೆಂಡ್ ಮಾಡಬೇಕೆಂದು ನನ್ನ ಬೇಡಿಕೆ ಇದೆ. 1992ರಲ್ಲಿ ಬಿಡಿಎ ನಲ್ಲಿ ಲೇಜೌಟ್ ಆಗಬಾರದೆಂದು ನಿರ್ಣಯವಾಯಿತು. ಆದರೂ ಲೇಔಟ್ ಅನ್ನು ಜಿಲ್ಲಾಧಿಕಾರಿಗಳು ಮಾಡಿದ್ದಾರೆ. ಇದರಲ್ಲಿ ಇವರ ಕೈವಾಡ ಇದೆ. ಸರಕಾರ ಅವರನ್ನು ಸಸ್ಪೆಂಡ್ ಮಾಡಬೇಕೆಂದು ನನ್ನ ವಿನಂತಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಇದು ಬಹಳ ವ್ಯಾಲ್ಯುಯಬಲ್ ಪ್ರಾಪರ್ಟಿ 30 ಕೋಟಿ ರೂಪಾಯಿ ಬೆಲೆ ಬಾಳತಕ್ಕಂತಹ ಆಸ್ತಿ ಇದು. ಸರ್ವ ನಂ 30 ರಲ್ಲಿ 17 ಎಕರೆ 30 ಗುಂಟೆ ಜಮೀನು ರೈಲ್ವೆ ವಿಭಾಗಕ್ಕೆಸೇರಿದ್ದು. ರೈಲ್ವೆ ಷೆಡ್ ಅನ್ನು ಹಾಕಿ ಗೂಡ್ಸ್ ಟ್ರೈನ್‌ಗಳೇನು ಬರುತ್ತದೆ ಅಲ್ಲಿ ಅದನ್ನು ನಿಲ್ಲಿಸಬೇಕೆಂದು ಆ ಜಾಗವನ್ನು ಇಟ್ಟಿದ್ದರು. ಅದಕ್ಕೆ ಜಿಲ್ಲಾಧಿಕಾರಿಗಳು ಮತ್ತು ಕೆಲವು ಜನರು ಸೇರಿ ಫಾಲ್ಸ್ ರೆಕಾರ್ಡ್ ಅನ್ನು ಹಿಂದಿನಿಂದ ಕ್ರಿಯೇಟ್ ಮಾಡಿ 17 ಎಕರೆ ಜಮೀನನ್ನು ಪೂರ್ತಿಯಾಗಿ ಗಿಟ್ಟಿಸಬೇಕು ಎಂದು ವಿಚಾರ ಮಾಡುತ್ತಿದ್ದಾರೆ. ಖಾಸಗಿಯವರು ಈಗಾಗಲೇ ಫ್ಲಾಟ್‌ಗಳನ್ನು ಮಾಡಿ ಮಾರುತ್ತಿದ್ದಾರೆ. ಯಾವ ಅಧಿಕಾರಿಗಳು ಸರಕಾರೀ ಪ್ರಾಪರ್ಟಿಯನ್ನು ರಕ್ಷಣೆ ಮಾಡಬೇಕು ಅದೇ ಅಧಿಕಾರಿಗಜಳು ಫಾಲ್ಸ್ ಡಾಕ್ಯುಮೆಂಟ್ ಅನ್ನು ಕ್ರಿಯೇಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರೆಯಾವ ಪ್ರಾಪರ್ಟಿಯೂ ಕೂಡ ನಮ್ಮ ರಾಜ್ಯದಲ್ಲಿ ಉಳಿಯುವುದಿಲ್ಲ. ರೈಲ್ವೆ ಪ್ರಾಪರ್ಟಿಯಲ್ಲಿ 117 ಫ್ಲಾಟ್‌ಗಳನ್ನು ಹಾಕಿಸಿದ್ದಾರೆ. ಒಂದೊಂದು ಫ್ಲಾಟ್ ಕನಿಷ್ಟಪಕ್ಷ 30-40 ಲಕ್ಷ ರೂಪಾಯಿಗಳಾಗುತ್ತದೆ. ಅದು ಸೆಂಟರ್ ಇರತಕ್ಕಂಥಾದ್ದು ಅಲ್ಲಿ ವ್ಯಾಪಾರಸ್ಥರು ಖರೀದಿ ಮಾಡತಕ್ಕಂತಹ ಸಂಚನ್ನು ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಬೀದರಿಗೆ ಹೋದಾಗ ಎಲ್ಲಾ ಜನ ಸೇರಿ ಅವರ ಗಮನಕ್ಕೆ ತಂದಿದ್ದಾರೆ. ಇದರ ಮೇಲೆ ಕ್ರಮ ಜರುಗಿಸುತ್ತೇನೆಂದು ಮಾತು ಕೊಟ್ಟಿದ್ದಾರೆ. ಇದರಲ್ಲಿ ಕೆಲವು ಅಧಿಕಾರಿಗಳು ಕೆಲವು ಪುಡಾರಿಗಳು ಸೇರಿ ಯಾವ ರೀತಿಯಲ್ಲಾದರೂ ಇದನ್ನು ಕಬಳಿಸಬೇಕು, ಈ ಪ್ರಾಪರ್ಟಿಯನ್ನು ಹಷ್‌ಅಫ್ ಮಾಡಬೇಕೆನ್ನುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದಾರೆ. ಅವರೇನು ರೆಕಾರ್ಡ್ಸ್ ಕೇಳಿದ್ದಾರೆ ಅದನ್ನು ಸಂಪೂರ್ಣವಾಗಿ ಕಳುಹಿಸಿಲ್ಲ. ಮಂತ್ರಿಗಳೇ ಖುದ್ದಾಗಿ ಸ್ಪಾಟ್‌ಗೆ ಹೋಗಿ ಅಲ್ಲಿ ಎಲ್ಲವನ್ನೂ ನೋಡಿಕೊಂಡು ಬಂದು ಜಿಲ್ಲಾಧಿಕಾರಿಗಳು ಆದೇಶ ಕೊಟ್ಟರೂ ಎ.ಸಿ.ಯವರು ಅಲ್ಲಿ ಹಾಜರಿದ್ದರೂ ಕೂಡ ರೆಕಾರ್ಡ್ಸ್ ಕಳುಹಿಸಿ ಎಂದರೆ ಇಲ್ಲಿಯವರೆಗೂ ಕಳುಹಿಸದೇ ಇರುವ ಉದ್ದೇಶ ಗುಟ್ಟು ಏನು? ಈ ಆಸ್ತಿಯನ್ನು ಹಷ್‌ಅಫ್ ಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ಹಾಗೂ ಇದನ್ನು ಅವಾಯ್ಡ್ ಮಾಡಬೇಕೆನ್ನುವ ದೃಷ್ಟಿಯಿಂದ ಮಾಡುತ್ತಿದ್ದಾರೆ. ಇದು ಕೋಟ್ಯಾಂತರ ರೂಪಾಯಿ ಆಸ್ತಿಯ್ಯಾಗಿದೆ ತಕ್ಷಣ ತಾವು ಇದನ್ನು ವಶಪಡಿಸಿಕೊಳ್ಳಬೇಕು. ಮತ್ತು ವಿಲೇಜ್ ಅಕೌಂಟೆಂಟ್ ಅವರಿಂದ ಹಿಡಿದು ಜಿಲ್ಲಾಧಿಕಾರಿಗಳ ವರೆಗೆ ಯಾರ್ಯಾರು

ಈ ಫಾಲ್ಸ್ ರೆಕಾರ್ಡ್ಸ್ ಅನ್ನು ಕ್ರಿಯೇಟ್ ಮಾಡುವಲ್ಲಿ ಸಹಕರಿಸಿದ್ದಾರೆ ಪಡೆದುಕೊಂಡು ರೆಕಾರ್ಡ್ ಏನು ತಿದ್ದುಪಡಿ ಮಾಡಿದ್ದಾರೆ ಅದನ್ನು ಸರಿಪಡಿಸಬೇಕು. ಇದು ರೈಲ್ವೆ ಇಲಾಖೆ ಪ್ರಾಪರ್ಟಿಯಾಗಿದೆ. ಅವರಿಗೇ ಇದನ್ನು ವಹಿಸಿಕೊಡಬೇಕು. ಆ ರೀತಿಯಾಗಿ ಡಾಕ್ಯುಮೆಂಟ್ ಅನ್ನು ಸೃಷ್ಟಿ ಮಾಡಿ ರೈಲ್ವೆ ಇಲಾಖೆಯವರಿಗೆ ಹ್ಯಾಂಡ್ ಓವರ್ ಮಾಡಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಹಷ್ಮಿಯವರು ಮತ್ತು ವಿರೋಧ ಪಕ್ಷದ ನಾಯಕರಾದ ಮಾನ್ಯ ಖರ್ಗೆಯವರು ಬೀದರ್ ಜಿಲ್ಲೆಯಲ್ಲಿ ಸರ್ವೆ ನಂ.30 ಜಮೀನಿನ ಬಗ್ಗೆ ಇಲ್ಲಿ ಶೂನ್ಯವೇಳೆಯಲ್ಲಿ ಎತ್ತಿದ್ದಿರೆ. ಅವರು ಹೇಳಿದ್ದರಲ್ಲಿ ಸಂಪೂರ್ಣ ಸತ್ಯ ಇದೆ. ಮೇಲ್ಮನೆ ಮಾನ್ಯ ತಂಗಾರವರು ಇದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ಹಾಕಿದ್ದರು. ನಾನೂ ಕೂಡ ಅಲ್ಲಿಗೆ ಭೇಟಿ ಮಾಡುತ್ತೇನೆ ಎಂದು ಹೇಳಿದ್ದೆ. ನಾನು ಸ್ಥಳ ಪರಿಶೀಲನೆಯನ್ನು ಖುದ್ದಾಗಿ ಮಾಡಿದ್ದೇನೆ. ಇದು ಸುಮಾರು 20-25 ಕೋಟಿ ರೂಪಾಯಿ ಆಸ್ತಿ. ಬೀದರ್ ನಗರದ ಹಾರ್ಟ್ ಆಫ್ ದಿ ಸಿಟಿಯಲ್ಲಿ ಇರತಕ್ಕಂತಹ ಆಸ್ತಿ ಇದು. ಹಿಂದೆ ಯಾರ್ಯಾರೋ ಅಧಿಕಾರಿಗಳು ಬೇರೆಯವರೂ ಸೇರಿಕೊಂಡು ರೆಕಾರ್ಡ್‌ಗಳನ್ನು ಟ್ಯಾಂಪರ್ ಮಾಡಿದ್ದಾರೆ. ಒರಿಜನಲೀ ಇದು ರೈಲ್ವೆ ಇಲಾಖೆಗೆ ಸಂಬಂಧಪಟ್ಟ ಆಸ್ತಿ. ಡಿವಿಜನಲ್ ಕಮಿಷನರ್‌ರವರು ವಿಚಾರಣೆ ಮಾಡಬೇಕೆಂದು ಹೇಳಿದ್ದೇವೆ.ಈಗಾಗಲೇ ಡಿವಿಜನ್ ಕಮಿಷನರ್ ಅವರು ವಿಚಾರಣಾ ಅಧಿಕಾರಿಯಾಗಿದ್ದಾರೆ. ವಿಚಾರಣೆ ನಡೆಯುತ್ತಿದೆ. ಆದರೂ ಕೂಡ ಟ್ಯಾಂಪರಿಂಗ್ ಆಫ್ ರೆಕಾರ್ಡ್ ಮಾಡುವಲ್ಲಿ ಯಾವ್ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ ಅವರನ್ನು ಪತ್ತೆ ಹಚ್ಚಿ ಸಸ್ಪೆಂಡ್ ಮಾಡಬೇಕೆಂದು ಸೂಚನೆ ನೀಡಿದ್ದೇನೆ ಈಗಾಗಲೇ ಕೆಲವರು ಬೇರೆ ಬೇರೆ ಕಡೆ ಇದ್ದಾರೆ. ಆದೇ ಜಾಗದಲ್ಲಿ ಅವರುಗಳು ಇಲ್ಲ.ಈ ಜಾಗವನ್ನು ನಮಗೇ ಉಳಿಸಿಕೊಳ್ಳಬೇಕೆಂದು ಅಲ್ಲಿ ಒಬ್ಬ ಪೋಲೀಸಿನವರನ್ನು ಒಬ್ಬ ಅರಣ್ಯ ಅಧಿಕಾರಿ ಹಾಗೂ ಒಬ್ಬ ರೈಲ್ವೆ ಪೋಲೀಸರು ಈ ಮೂರು ಜನ ಪೋಲೀಸರು ಅಲ್ಲಿ ಟೆಂಟ್ ಹಾಕಿಕೊಂಡು ಅಲ್ಲೇ ಇರಬೇಕೆಂದು ಹೇಳಿದ್ದೇನೆ. ಅಲ್ಲಿ ಟೆಂಡ್ ಹಾಕಿಕೊಂಡಿದ್ದಾರೆ. ಅಲ್ಲಿ ಈಗಾಗಲೇ ಯಾರು ಕಟಡಗಳನ್ನು ಕಟ್ಟುತ್ತಿದ್ದಾರೆ ಅದನ್ನು ನಿಲ್ಲಿಸಬೇಕೆಂದು ಹೇಳಿದ್ದೇನೆ. ಹಿಂದೆ ಫೌಂಡೇಷನ್ ಅನ್ನು 2-3 ಕಡೆ ಹಾಕಿದ್ದಾರೆ. ಹಿಂದೆ ಸ್ವಲ್ಪ ಕಟ್ಟಡ ಕಟ್ಟಿದ್ದಾರೆ. ಅದೆಲ್ಲವನ್ನೂ ನಿಲ್ಲಿಸಬೇಕೆಂದು ಹೇಳಿದ್ದೇನೆ. ಯಾವುದೇ ಕಾರಣಕ್ಕೂ ಈ ಪ್ರಾಪರ್ಟಿಯನ್ನು ಬೇರೆಯವರಿಗೆ ಸೇರುವುದಕ್ಕೆ ಬಿಡುವುದಿಲ್ಲ. ಇದು ರೈಲ್ವೆ ಪ್ರಾಪರ್ಟಿ. ಇದನ್ನು ರೈಲ್ವೆ ಇಲಾಖೆಯವರಿಗೇ ಕೊಡಿಸಲಿಕ್ಕೆ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತೇನೆ. ಕೇಂದ್ರ ರೈಲ್ವೆ ಸಚಿವರಾದ ಮಾನ್ಯ ರಾಮ ವಿಲಾಸ್ ಪಾಸ್ವಾನ್ ಅವರಿಗೆ ಪತ್ರ ಬರೆದಿದ್ದೇನೆ ಅಲ್ಲಿರತಕ್ಕಂತಹ ಲಾಯರ್ ಸರಿ ಇಲ್ಲವೆಂದು ಹೇಳಿದರು. ಅವರನ್ನು ಬದಲಾವಣೆ ಮಾಡಿ ಬೇರೆ ಲಾಯರಿಗೆ ಕೊಡಬೇಕೆಂದು

ಹೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರಾದ ಹಷ್ಮಿಯವರು ಯಾವುದೇ ರೀತಿಯ ಸಂದೇಹ ಪಡುವುದು ಬೇಡ ಇದು ಸರಕಾರೀ ಆಸ್ತಿಯಾಗಿಯೇ ಉಳಿಯುತ್ತದೆ ಸರಕಾರಕ್ಕೇ ಇದನ್ನು ಉಳಿಸುತ್ತವೆಂದು ತಮ್ಮ ಮೂಲಕ ಸದನಕ್ಕೆ ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ದಿನಾಂಕ 22-2-97 ರಂದು ನಾನೂ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಅದಕ್ಕೆ 27ನೇ ತಾರೀಖು ತಾವು ಉತ್ತರ ಕಳುಹಿಸಿದ್ದೀರಿ. ಅದರಲ್ಲಿಯೂ ಕೂಡ ಇದನ್ನು ಹೇಳಿದ್ದೀರಿ. ಡಿವಿಜಲ್ ಕಮಿಷನರ್‌ರವರನ್ನು ವಿಚಾರಣೆ ಮಾಡಿ ಕಳುಹಿಸಿ ಎಂದು ಹೇಳಿದ್ದೀರಿ. ಇದು ಆಗಿ 2-3 ತಿಂಗಳಾಯಿತು. ನನಗೆ ಉತ್ತರ ಕೊಟ್ಟೇ ಒಂದು ತಿಂಗಳಾಯಿತು. ನೀವು ಒಂದು ನಿರ್ದಿಷ್ಟ ಸಮಯ ಅಂದರೆ 15 ದಿವಸವೋ ಒಂದು, ತಿಂಗಳೋ ಎಂದು ಸಮಯ ನಿಗದಿ ಮಾಡಿ. ಅವರಿಂದ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳಿ. ಅಧಿಕಾರಿಗಳಿಗೂ ಇದನ್ನು ಅವಾಯ್ಡ್ ಮಾಡುವುದು ಬೇಕಾಗಿದೆ. ಇನ್ನು ಸ್ವಲ್ಪ ದಿವಸ ಹೋಗಲಿ ನೋಡೋಣ ಎಂದು ಮಾಡುತ್ತಾರೆ. ಕೆಳಗಿನ ಅಧಿಕಾರಿಗಳು ಅವರಿಗೆ ಕೋ-ಆಪರೇಷನ್ ಕೊಡುವುದಿಲ್ಲ. ಇಂತಿಷ್ಟು ದಿನಗಳಲ್ಲಿ ವರದಿ ಬರಬೇಕೆಂದು ಸಮಯ ನಿಗದಿ ಮಾಡಿದರೆ ಸಾಧ್ಯವಾಗುತ್ತದೆ. ಅಲ್ಲಿಯವರೆಗೆ ಸ್ಟೇ ಮಾಡಿದ್ದೇವೆಂದುಹೇಳಿದ್ದೀರಿ. ಮುನಿಸಿಪಾಲಿಟಿಯವರು ವಿತ್‌ಡ್ರಾ ಮಾಡಬೇಕೆಂದು ತಿಳಿಸಬೇಕು. ಇದು 20-25 ಕೋಟಿ ರೂಪಾಯಿ ಬೆಲೆ ಬಾಳತಕ್ಕಂತಹ ಆಸ್ತಿ ಎಂದು ತಾವೇ ಹೇಳಿದ್ದೀರಿ. ಇದೇ ರೀತಿಯಾಗಿ ಅನೇಕ ಕಡೆ ಕಬಳಿಸುತ್ತಿದ್ದಾರೆ. ಯಾರಾದರೂ ತಪ್ಪಿ ಅನುಮತಿಕೊಟ್ಟಿದ್ದರೆ ಅದೆಲ್ಲಾ ಕ್ಯಾನ್ಸಲ್ ಮಾಡಬೇಕು.20 ದಿವಸದಲ್ಲಿ ಅದನ್ನು ತರಿಸಿಕೊಂಡು ಮುಂದಿನ ಕ್ರಮ ಜರುಗಿಸಿ.

ಶ್ರೀ ರಮೇಶ ಸಿ. ಜಿಗಜಿಣಗಿ : ಮುನಿಸಿಪಾಲಿಟಿಯವರಿಗೆ ಮತ್ತು ಅಲ್ಲಿನ ಬೀದರ್ ಡೆವಲಪ್‌ಮೆಂಟ್ ಅಥಾರಿಟಿ, ಕೆಇಬಿ ಅವರಿಗೆ ಎಲ್ಲರಿಗೂ ಸೂಚನೆ ನೀಡಲಾಗಿದೆ. ಇವರೇನಾದರೂ ಅವರುಗಳಿಗೆ ಅನುಮತಿ ಕೊಟ್ಟರೆ ಕಾನೂನು ಪ್ರಕಾರ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ನಾನು ಹೇಳಿದ ಮೇಲೆ ಯಾರಿಗೂ ಅನುಮತಿ ಕೊಟ್ಟಿಲ್ಲ. ಆದರೆ ಇದಕ್ಕೆ ಒಂದು ತಿಂಗಳು 20 ದಿವಸ ಎಂದು ದಿನವನ್ನು ನಿಗದಿ ಮಾಡಬೇಕೆಂದು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಅದು ಬೇಡ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೆ ವರದಿ ತರಿಸಿಕೊಳ್ಳುತ್ತೇನೆ. ಸಾಧ್ಯವಾದರೆ ಇಂದೂ ಕೂಡ ಡಿ.ಸಿ. ಡಿವಿಜನಲ್ ಕಮಿಷನರ್ ಅವರ ಹತ್ತಿರ ಮಾತನಾಡುತ್ತೇನೆ.

ಶ್ರೀ ಸಯ್ಯದ್ ಜಲ್ಪಕರ್ ಹಷ್ಮಿ : ಜಿಲ್ಲಾಧಿಕಾರಿಗಳು ಇದರಲ್ಲಿ ಶಾಮೀಲು ಇದ್ದಾರೆ ಅವರನ್ನು ಸಸ್ಪೆಂಡ್ ಮಾಡಬೇಕು. ಇದು ಮಾನ್ಯ ಸಚಿವರಿಗೂ ಗೊತ್ತಿದೆ. ಜಿಲ್ಲಾಧಿಕಾರಿಗಳು ಬದಲಾವಣೆಯಾಗಬೇಕು.

12.40 ಪಿ ಎಂ

(ಮಾನ್ಯ ಸದಸ್ಯರಾದ ಹಷ್ಮಿಯವರು ಸಮರ್ಪಕವಾದ ಉತ್ತರ ದೊರೆತಿಲ್ಲವೆಂದು ಪ್ರತಿಭಟಿಸಿ ಭಾವಿಗೆ ಬಂದು ಕುಳಿತರು)

ಉಪಸಭಾಧ್ಯಕ್ಷರು : ಸಚಿವರು ನೀವು ಹೇಳಿದ್ದನ್ನು ಒಪ್ಪಿಕೊಂಡಿದ್ದಾರೆ. ವಿರೋಧಪಕ್ಷದ ನಾಯಕರು ಕೂಡ ಮಾತನಾಡಿದ್ದಾರೆ. ತಾವು ಈ ರೀತಿ ಮಾಡುವುದು ಸರಿಯಲ್ಲ. ರಿಪೋರ್ಟ್‌ತರಿಸಿ ಇವತ್ತೇ ಫೋನ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಹೀಗೆ ಮಾಡಿದರೆ ಹೇಗೆ? ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ.

ಒ) ಆಂಗ್ಲ ಪತ್ರಿಕೆಯಲ್ಲಿ ಶಾಸಕರ ಬಗ್ಗೆ ಬಂದಿರುವ ವರದಿ

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಇಂಗ್ಲೀಷ್ ಪೇಪರ್‌ನಲ್ಲಿ ಶಾಸಕರು ಈ ಸದನಕ್ಕೆ ಪ್ಯಾಂಟು, ಷರಟು ಬಿಟ್ಟು ಚಿಟ್ಟಿಯಾಗಿ ಬರಬೇಕೆಂದು ಹೇಳಿದ್ದಾರೆ. ನಮ್ಮನ್ನು ಈ ರೀತಿಯಲ್ಲಿ ಇರಬೇಕೆಂದು ಶಾಸಕರಾಗಿ ನಮ್ಮ ಜನರುಆಯ್ಕೆ ಮಾಡಿ ಕಳುಹಿಸಿದ್ದಾರೋ? ಶಾಸಕರಿಗೆರಕ್ಷಣೆ ಕೊಡಲು ಈ ಸರ್ಕಾರ ಇದೆಯೇ? ಯಾರೋ ಒಬ್ಬರು ರಾಜಾಜಿನಗರದ ಪತ್ರಿಕೆಯ ಕಛೇರಿಗೆ ಹೋಗಿ, ಎಲ್.ಟಿ.ಟಿ.ಐ.ಯವರು ಎಂದು ಹೇಳಿ ತ್ರೆಥನ್ ಮಾಡಿದರೆ. ಕಂಪ್ಲೆಂಟ್‌ನ್ನು ನನ್ನ ಹೆಸರಿನಲ್ಲಿ ಬುಕ್ ಮಾಡಿದ್ದಾರೆ. ರಾಜೇಂದ್ರನ್ ಫೋನ್ ಮಾಡಿದ್ದಾರೆ ಎಂಬ ಆಧಾರದ ಮೇಲೆ ಕಂಪ್ಲೆಂಟ್ ಬುಕ್ ಮಾಡಿದ್ದಾರೆ. There is a bid conspiracy in this and I have brought it to the notice of the Home Minister also that it has damaged my name.

ಇದು ಏನು ನ್ಯಾಯ ಸ್ವಾಮಿ? ಸತ್ಯಾಂಶವನ್ನು ಹೇಳುತ್ತೇನೆ. ನಾನು ನಿರಪರಾಧಿ ನಿರಪರಾಧಿ ಅನ್ಯಾಯಕ್ಕೆ ಒಳಗಾಗಬಾರದು. ಒಬ್ಬರು ಕೊಟ್ಟಿರುವ ಕೇಸ್ ಮೇಲೆ ಇಂಗ್ಲೀಷ್ ಪೇಪರ್ ನಿರಪರಾಧಿ ಅನ್ಯಾಯಕ್ಕೆ ಒಳಗಾಗಬಾರದು. ಒಬ್ಬರು ಕೊಟ್ಟಿರುವ ಕೇಸ್ ಮೇಲೆ ಇಂಗ್ಲೀಷ ಪೇಪರ್‌ನಲ್ಲಿ ಅರೆಸ್ಟ್ ವಾರಂಟ್ ತಂದಿದ್ದರೆ ಎಂದು ಬರೆದಿದ್ದಾರೆ, ಇದು ನ್ಯಾಯವೆ? ಇದು ಧರ್ಮವೇ? ಈ ರೀತಿ ಕಂಪ್ಲೆಂಟ್ ಬುಕ್ ಮಾಡಿಸಿಕೊಳ್ಳಲಿಕ್ಕೆ ನಾನು ಶಾಸಕನಾಗಿ